

ಕಣ್ಣೀರು. ಅವನು ಅಳುವುದಿಲ್ಲ. ಅಮ್ಮನನ್ನು ಸಮಾಧಾನಿಸಲು ಸಂಜೆಗೆ ಒಪ್ಪಿಸಿ ಮನೆ ಬಿಡುತ್ತಾನೆ.

ಎಷ್ಟೋ ಸಂಜೆಗಳು ಯಾರದೋ ಬದುಕಿಗೆ, ಯಾವುದೋ ಕಷ್ಟಕ್ಕೆ, ಯಾವುದೋ ನಷ್ಟಕ್ಕೆ ನಿರ್ಣಾಯಕ ಪಾತ್ರವಹಿಸಿ ಬಿಡುತ್ತವೆ. ಸಂಜೆ ಹತ್ತಿರವಾಗುತ್ತಲೇ ಮನೆ ನೆನಪಾಗುತ್ತದೆ. ಹೊರಡುವ ಧಾವಂತ. ಮನೆಯೇ ಇಲ್ಲದವರಿಗೆ ಏನು ನೆನಪಾಗುತ್ತದೆ? ರಾತ್ರಿಯ ಭೀಕರತೆಯಾ? ಹಗಲಿನ ಹೊಳಪಾ? ಮನೆ ಇಲ್ಲದವರಿಗೆ ಧಾವಂತವೇ ಇಲ್ಲ. ಅವರು ಎಲ್ಲಿಗೂ ಹೋಗಬೇಕಿಲ್ಲ. ಅವರು ಸಂಜೆಯೇ ಇಲ್ಲದ ಜನ. ಅವರಿಗೆ ಹಗಲೂ ಇಲ್ಲ, ರಾತ್ರಿಯೂ ಇಲ್ಲ.

ಅವರಿಗೆ ರಾತ್ರಿ ಇಷ್ಟವೋ ಹಗಲು ಇಷ್ಟವೋ... ಬಡತನ, ಹಸಿವು ತೆರೆದಿಡುವ ಹಗಲಿಗಿಂತ, ಅದನ್ನು ಮುಚ್ಚಿಡುವ ರಾತ್ರಿಯೇ ಚೆಂದ ಅಂದುಕೊಳ್ಳಬಹುದಾ?

ಕೆಲವರಿಗೆ ಸಂಜೆ ಅಂದರೆ ಭಯ. ಕೆಲವರಿಗೆ ಸಂಜೆಯೇ ಅಭಯ. ಕೆಲವರಿಗೆ ದುಃಖ, ಮತ್ತೆ ಕೆಲವರಿಗೆ ಸುಖ. ಊರಿನ ಸಂಜೆಗೆ ಆತ್ಮೀಯತೆ ಇದೆ. ನಗರದ ಸಂಜೆಗೆ ಅನಾಥತೆ ಇದೆ. ಹೊಲದ ಸಂಜೆ ಬೇರೆ, ಕಾಡಿನ ಸಂಜೆ ಬೇರೆ. ತೋಟದ ಸಂಜೆ ಬೇರೆ, ಆಟದ ಬಯಲಿನ ಸಂಜೆ ಬೇರೆ. ಮಕ್ಕಳ ಸಂಜೆ ಬೇರೆ, ದೊಡ್ಡವರ ಸಂಜೆ ಬೇರೆ. ಹೆಣ್ಣಿನ ಸಂಜೆ ಬೇರೆ. ಗಂಡಿನ ಸಂಜೆ ಬೇರೆ... ಇಲ್ಲಿ ಒಬ್ಬೊಬ್ಬರದು ಒಂದೊಂದು ಸಂಜೆ.

ಎಷ್ಟೊ ಜನಕ್ಕೆ ಬೆಳ್ ಬೆಳಗ್ಗೆಯೇ ಈ ಹಗಲನ್ನು ಏನು ಮಾಡಲಿ ಎಂಬ ಚಿಂತೆ. ಈ ಬೆಳಕನ್ನು ಹೇಗೆ ಖರ್ಚು ಮಾಡಲಿ ಎಂಬ ಯೋಚನೆ. ಅಂತೆಯೆ ಎಷ್ಟೋ ಜನಕ್ಕೆ ಸಂಜೆ ಹೊತ್ತಿನಲ್ಲಿ ಬರುತ್ತಿರುವ ಈ ರಾತ್ರಿಯನ್ನು ಏನು ಮಾಡಲಿ ಎಂಬ ಚಿಂತೆ. ಯಾರ ಬದುಕಿನ ಕತ್ತಲನ್ನೂ ಯಾರೂ ಕೊಳ್ಳುವುದಿಲ್ಲ. ಕತ್ತಲೆ ಕೈ ಹಿಡಿಯುವುದು ಯಾರಿಗೂ ಬೇಕಿರುವುದಿಲ್ಲ. ಒಮ್ಮೊಮ್ಮೆ ಹಿತವಾದ ಸಂಜೆ ಕೈ ಹಿಡಿದು ಕೂರಿಸಿಕೊಂಡಾಗ ಇಡೀ ಹಗಲಿನಲ್ಲಿ ನಡೆದ ಹೋದ ಬದುಕು ಸುಳ್ಳು ಅನಿಸಿಬಿಡುತ್ತದೆ. ಯಾರೋ ಬೈದದ್ದು, ಯಾರಿಗೋ ಬೈದದ್ದು, ಯಾರನ್ನೋ ನಗಿಸಿದ್ದು, ಇನ್ ಯಾರನ್ನೋ ಅವಮಾನಿಸಿದ್ದು, ತಾನೂ ಅವಮಾನ ಉಂಡದ್ದು ಎಲ್ಲವೂ ಸುಳ್ಳು... ಇವೆಲ್ಲವೂ ಸುಳ್ಳು ಅನಿಸುತ್ತದೆ. ಬರಲಿರುವ ಕತ್ತಲು ಅದೂ ಕೂಡ ಸುಳ್ಳೇ ಎನ್ನುವ ಭಾವ.

ಇಡೀ ಬದುಕೇ ಹಗಲು. ಮುಪ್ಪು ಅನ್ನೋದು ಸಂಜೆ. ಮೈಗೆಲ್ಲ ಸುಕ್ಕು, ಕೂದಲು ಬಿಳಿ, ಬಾಗಿದ ಬೆನ್ನು, ಬದುಕು ಅರ್ಥವಾಗುವ ಹೊತ್ತು ಅದು. ಇಡೀ ದಿನವನ್ನು ಸಂಜೆಯಲ್ಲಿ ಅವಲೋಕಿಸಿಕೊಳ್ಳುವಂತೆ ಮುಪ್ಪಿನಲ್ಲಿ ಇಡೀ ಬದುಕಿನ ಮೌಲ್ಯಮಾಪನ ಶುರುವಾಗುತ್ತದೆ.

ಕತ್ತಲೆಯು ಸಂಜೆಯನ್ನು ನುಂಗಿ ನೀರು ಕುಡಿಯುವಂತೆ, ಮರಣವು ಮುಪ್ಪನ್ನು ನುಂಗಿ ಹಾಕುತ್ತದೆ. ನಂತರ ಮತ್ತೊಂದು ಜನ್ಮ, ಮತ್ತೊಂದು ಹಗಲು. ಮುಪ್ಪು ಕೆಲವರಿಗೆ ಸಾರ್ಥಕ. ಕೆಲವರಿಗೆ ಸಮಾಧಾನ. ಅನಾಥ ಮುಪ್ಪು, ರೋಗಿಷ್ಟ ಮುಪ್ಪು, ಕಾಳಜಿಯ ಮುಪ್ಪು... ಬಗೆಬಗೆಯ ಸಂಜೆಯಂತೆ!

ಒಂದು ಹಗಲು, ಒಂದು ಸಂಜೆ, ಒಂದು ಮುಂಜಾನೆ ಮತ್ತು ಒಂದು ರಾತ್ರಿ... ಇವೆಲ್ಲವೂ ಮನುಷ್ಯನ ಇಡೀ ಬದುಕಿನ ಪ್ರತಿಬಿಂಬದಂತೆ. ಮುಂಜಾನೆ ಎಂಬುದು ಮಗು. ಹಗಲು ಎಂಬುದು ತಾರುಣ್ಯ. ಸಂಜೆಯೇ ಮುಪ್ಪು. ಇರುಳೇ ಎಲ್ಲವನ್ನೂ ಮುಗಿಸಿ ಹಾಕುವ ಮರಣ. ದಿನವೊಂದನ್ನು ಚೆನ್ನಾಗಿ ಬಳಸಿಕೊಳ್ಳಲು ಕಲಿತರೆ ಇಡೀ ಬದುಕು ನಮ್ಮ ಕೈ ಹಿಡಿಯುತ್ತದೆ.

ಒಬ್ಬರ ಮುಪ್ಪು ಇನ್ನೊಬ್ಬರಿಗೆ ಪಾಠ. ಮತ್ತೆ ಯಾರಿಗೋ ಅರಿವು. ಮುಪ್ಪು ಬದುಕಿನ ಅರಿವು. ಸಂಜೆ ಎಂಬುದು ದಿನದ ಅರಿವು. ಬದುಕು ಅರ್ಥವಾಗುವ ಕ್ಷಣ. ಸಂಜೆ ಎಂಬುದು ಪಾಠ. ಸಂಜೆ ಎಂಬುದು ಸ್ವಚ್ಛ ಅಧ್ಯಾತ್ಮ ಥೇಟ್ ಮುಪ್ಪಿನಂತೆ... ●

